ಆ) ಹೆಚ್ಚಿನ ಸಂಖ್ಯೆಯ ಯಾತ್ರಿಕರು/ಪ್ರವಾಸಿಗರು ಭೇಟಿ ನೀಡುತ್ತಿರುವ ಹಾಗೂ ಪ್ರಮುಖವೆನಿಸುವ ದೇವಾಲಯಗಳ ಬಳಿ ಪ್ರವಾಸಿ ಸೌಲಭ್ಯಗಳನ್ನು ಅನುದಾನದ ಲಭ್ಯತೆಗೆ ಅನುಸಾರ ನಿರ್ಮಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ಕಲ್ಲಳ್ಳಿಯ ಶ್ರೀ ವೆಂಕಟರಮಣ ದೇವಸ್ಥಾನದ ಬಳಿ ರೂ. 50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸ ಕಾಮಗಾರಿ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. ಈ ಕಾಮಗಾರಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ. 5.00 ಲಕ್ಷಗಳನ್ನು ಕಾದಿರಿಸಿಕೊಳ್ಳಲಾಗಿದೆ.

ಹೊಸಮರಳು ನೀತಿ ಜಾರಿಗೆ ತರುವುದು

145 (397) ಸಿದ್ದು ಸವದಿ (ತೇರದಾಳ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ತೆರನಾದ ಮರಳು ನೀತಿ ಜಾರಿಯಲ್ಲಿ ಇದೆ; ಇದಕ್ಕೆ ಇರುವ ನಿಯಮಾವಳಿಗಳಾವುವು;

ಆ) ರಾಜ್ಯದಲ್ಲಿ ದಿನಂಪ್ರತಿ ಎಷ್ಟು ಮರಳು ಬೇಡಿಕೆ ಇದೆ; ಇದನ್ನು ಯಾವ ರೀತಿಯಿಂದ ಪೂರೈಸಲಾಗುವುದು;

ಇ) ಹೊಸ ಮರಳು ನೀತಿಯನ್ನು ಜಾರಿಗೆ ತರಲಾಗಿದೆಯೇ;

ಈ) ಹಾಗಿದ್ದಲ್ಲಿ, ಯಾವ ರೀತಿ ಗಣಿಗಾರಿಕೆ ನಡೆಸಲು ಅನುಮತಿಯನ್ನು ನೀಡಲಾಗುವುದು;

ಉ) ಪ್ರಸ್ತುತ ಸುಮಾರು ಶೇಕಡ 90ರಷ್ಟು ನಿಯಮ ಬಾಹಿರವಾಗಿ ಮರಳು ತೆಗೆಯುತ್ತಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ;

ಊ) ಈ ಗಣಿಗಾರಿಕೆಯಿಂದ ರಾಜ್ಯದ ಖಜಾನೆಗೆ ಬರುವ ಆದಾಯವೆಷ್ಟು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು):

ಅ) ಪ್ರಸ್ತುತ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಗಳು 1994ರ ನಿಯಮ 21 (2–B) ರ ಪ್ರಕಾರ ರಾಜ್ಯದಲ್ಲಿ ಮರಳು ಬ್ಲಾಕ್‌ಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇ ಮಾಡಲಾಗುತ್ತಿದೆ.

ಆ) ರಾಜ್ಯದಲ್ಲಿ, ದಿನಂಪ್ರತಿ ಸುಮಾರು 5 ಲಕ್ಷ ಟನ್ ಮರಳಿಗೆ ಬೇಡಿಕೆ ಇದೆ. ಇದನ್ನು ಹರಾಜು ಮಾಡಿರುವ ಬ್ಲಾಕ್‌ಗಳಿಂದ ಗುತ್ತಿಗೆದಾರರು ಪೂರೈಕೆ ಮಾಡುತ್ತಿದ್ದಾರೆ.

ಇ) ದಿನಾಂಕ: 29.01.2011ರ ಸರ್ಕಾರದ ಆದೇಶದ ಸಂಖ್ಯೆ: ಸಿಐ 84 ಎಂಎಂಎನ್ 2009ರಲ್ಲಿ ಕರ್ನಾಟಕ ಮರಳು ನೀತಿ–2011ನ್ನು ಪ್ರಕಟಿಸಿದ್ದು, ದಿನಾಂಕ: 01.04.2011ರಿಂದ ಹೊಸ ಮರಳು ನೀತಿಯು ಜಾರಿಗೆ ಬರುತ್ತದೆ.

ಈ) ಕರ್ನಾಟಕ ಮರಳು ನೀತಿ–2011ರನ್ವಯ ಕರಾವಳಿ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಉಳಿದಕಡೆ ಮರಳು ಗಣಿಗಾರಿಕೆಯ ಪೂರ್ಣ ಹೊಣೆಗಾರಿಕೆಯನ್ನು ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ವಹಿಸಿದ್ದು, ಹೊಸ ನೀತಿಯು ದಿನಾಂಕ: 01.04.2011ರಿಂದ ಜಾರಿಗೆ ಬರುತ್ತದೆ.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮರಳು ಗಣಿಗಾರಿಕೆ ಪರವಾನಿಗೆ ಮಂಜೂರಾತಿ/ಉಸ್ತುವಾರಿ ಸಮಿತಿಗಳನ್ನು ರಚಿಸಿದ್ದು ಮರಳು ಗಣಿಗಾರಿಕೆಗಾಗಿ ಜಿಲ್ಲಾಧಿಕಾರಿಗಳು ಪರವಾನಿಗೆ ಮಂಜೂರು ಮಾಡುತ್ತಾರೆ.

ಉ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಜನವರಿ ಅಂತ್ಯದವರೆಗೆ 48,429 ಮರಳು ಸಾಗಾಣಿಕೆ ವಾಹನಗಳನ್ನು ತಪಾಸಣೆಗೊಳಪಡಿಸಿದ್ದು, ಅಧಿಕೃತ ಪರವಾನಿಗೆ ಇಲ್ಲದ 4,432 ವಾಹನಗಳಿಗೆ ರೂ 320.41 ಲಕ್ಷಗಳ ದಂಡ ವಿಧಿಸಿ ವಸೂಲಿ ಮಾಡಲಾಗಿದೆ. 77 ಜನರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.

ಊ) 2009–10ನೇ ಸಾಲಿನಲ್ಲಿ ಮರಳು ಗಣಿಗಾರಿಕೆಯಿಂದ ರಾಜ್ಯದ ಖಜಾನೆಗೆ ರೂ. 4394.87 ಲಕ್ಷ ಹಾಗೂ 2010–11ನೇ ಸಾಲಿನಲ್ಲಿ ರೂ. 1914.70 ಲಕ್ಷಗಳ ಆದಾಯ ಬಂದಿರುತ್ತದೆ.

ನಾಗಮಂಗಲ ಟೌನ್ ಪಂಚಾಯಿತಿ ಮೇಲ್ದರ್ಜೆಗೇರಿಸುವುದು

146 (389) ಶ್ರೀ ಸುರೇಶ್‌ಗೌಡ (ನಾಗಮಂಗಲ): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ಟೌನ್ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಟೌನ್ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?